ಪರವಾಗಿಲ್ಲಾಂತ ಅನ್ನೋದಕ್ಕೆ ಈಗ್ಲೇ ಪೀಠಿಕೆ ಹಾಕ್ಬೇಡಿ.'

'ಯಾಕೆ? ಸ್ವಲ್ಪ ತಡವಾದ್ರೂ ಬಾರದೆ ಎಲ್ಲೋಗ್ತೇನೆ. ಅಷ್ಟಕ್ಕೂ ದೀಪೂ ಇದ್ದಾನಲ್ಲ' ಎನ್ನುತ್ತಾ ತಾನು ತಡವಾಗಿ ಮನೆಗೆ ಬಂದರೂ ಸೂಕ್ತ ಬಂದೋಬಸ್ತ್ ಮಾಡಿದ್ದೇನೆಂಬ ಅರ್ಥ ಬರುವ ಮಾತನ್ನಾಡಿದರು ಪ್ರೊ. ಭಾಸ್ಕರ್.

ಡಾ. ಗಣೇಶ್ ಲವಲವಿಕೆಯ ಮಾತನಾಡುವ ಶೈಲಿ ಮೊದಲಿನಿಂದಲೂ ಶೀಲಾಳಿಗೆ ಬಹಳ ಸೇರುತ್ತಿತ್ತು. ಉಕ್ಕುವ ಉತ್ಸಾಹದ ಡಾ. ಗಣೇಶ್ ಅದಾಗಲೇ ಒಂದು ಮಗುವಿನ ತಂದೆ. ಸಂಸಾರದ ಭಾರ ಹೊತ್ತವನಂತಲ್ಲದೆ ಸದಾ ಹದಿಹರೆಯದ ಯುವಕನಂತೆ ಆತ ವರ್ತಿಸುತ್ತಿದ್ದ. ಶೀಲಾ ಹಾಗೂ ಡಾ. ಗಣೇಶ್ ಇಬ್ಬರೇ ಕುಳಿತು ಪರಸ್ಪರ ಎಗ್ಗು ಬಿಟ್ಟು ಮಾತನಾಡುವುದನ್ನು ಕಂಡಾಗಲೆಲ್ಲ ದೀಪೂಗೆ ಮುಜುಗರ ಅನಿಸುತ್ತಿತ್ತು. ಅವರಿಬ್ಬರ ನಡುವಿನ ಸಲುಗೆ ನಿಮಿತ್ತವಾಗಿ ಶೀಲಾಳಲ್ಲಿ ಲವಲವಿಕೆ ಮೂಡುತ್ತಿದ್ದುದನ್ನು ದೀಪೂ ಗಮನಿಸುತ್ತಿದ್ದ. ಒಡತಿ ಖುಷಿಯಾಗಿರುವುದನ್ನು ಕಾಣುವ ಆಸೆಯೇನೋ ಆತನಿಗಿದೆ. ಆದರೆ ಅವರಿಬ್ಬರ ಮಾತುಕತೆಯ ನಡುವೆ ಹರಿಯುತ್ತಿದ್ದ ಸಲುಗೆ ಆತನಿಗೆ ಸೇರುತ್ತಿರಲಿಲ್ಲ. ಎಳವೆಯಿಂದಲೇ ಜೊತೆಯಾಗಿ ಬೆಳೆದವರು ಅನ್ನೋ ಕಾರಣದಿಂದ ಇಷ್ಟೊಂದು ಸಲುಗೆಯೆ? ಇರಬಹುದು. ಅದನ್ನೆಲ್ಲ ತಪ್ಪಾಗಿ ಅರ್ಥೈಸಬಾರದು ಎಂದು ದೀಪೂ ಸಮಾಧಾನಪಟ್ಟುಕೊಳ್ಳುತ್ತಿದ್ದ.

ಕೆಲವೊಮ್ಮೆ ದೀಪೂ ಡಾ. ಗಣೇಶ್ ಮನೆಗೂ ಹೋಗಿ ಬರಬೇಕಾಗುತ್ತಿತ್ತು. ತಮ್ಮ ಮನೆಯಲ್ಲಿ ಸಿದ್ಧವಾದ 'ಹೊಸರುಚಿ' ದೀಪೂ ಮೂಲಕ ಡಾ. ಗಣೇಶರ ಮನೆ ಸೇರುತ್ತಿತ್ತು. ಇಂತಹ ಕೆಲಸದಲ್ಲಿ ಆತನಿಗೆ ವಿಶೇಷ ಆಸಕ್ತಿ ಇರಲಿಲ್ಲವಾದರೂ ಇತರ ಕೆಲವು ಪ್ರಯೋಜನಗಳು ಆತನಿಗಿರುತ್ತಿದ್ದುವು. ಆಗಿಂದಾಗ ವೀರನಗರಕ್ಕೆ ಹೋಗಿ ಬರುವ ಅವಕಾಶ ಆತನಿಗೆ ಲಭಿಸುತ್ತಿತ್ತು. ಆ ಮೂಲಕ ಪೇಟೆಯ ನಾಲ್ಕಾರು ಮಂದಿಯ ಗೆಳೆತನವೂ ಲಭ್ಯವಾಯಿತು. ಒಮ್ಮೊಮ್ಮೆ ಬೇಸರವೆನಿಸಿದಾಗ ಶೀಲಾ ಕೂಡ ದೀಪೂ ಜೊತೆ ಡಾ. ಗಣೇಶ್ ಮನೆಗೆ ಬಂದುಬಿಡುತ್ತಿದ್ದಳು. ಸಾಯಂಕಾಲದವರೆಗೆ ಅಲ್ಲೇ ಹರಟೆ ಹೊಡೆಯುತ್ತ ಕುಳ್ಳಿರುತ್ತಿದ್ದಳು. ನಡುವಿನ ಸಮಯವನ್ನು ದೀಪೂ ಗೆಳೆಯರ ಜೊತೆ ಮೋಜು ಮಾಡುವುದಕ್ಕೋ ಸಿನಿಮಾ ನೋಡುವುದಕ್ಕೋ ಬಳಸುತ್ತಿದ್ದ. ಹಿಂದಿರುಗಿ ಹೋಗುವಾಗ ಶೀಲಾಳ ಜೊತೆ ಬಸ್ಸಿಗೆ ಕಾಯುತ್ತಿದ್ದ ದೀಪೂವನ್ನು ಕಂಡ ಆತನ ಗೆಳೆಯರು ದೂರದಿಂದಲೇ ಮುಸಿಮುಸಿ ಮಾತನಾಡಿಕೊಳ್ಳತೊಡಗಿದರೆ ದೀಪೂಗೆ ಹೇಗೆ ಹೇಗೊ ಆಗುತ್ತಿತ್ತು.

ಒಮ್ಮೆಯಂತೂ 'ಒಳ್ಳೆ ಹಕ್ಕೀನ್ನೇ ಹಾರಿಸ್ಕೊಂಡು ಬಂದಿದ್ದಾನೆ ಕಣೋ' ಅಂತ ಒಬ್ಬಾತ ಗೆಳೆಯರೊಂದಿಗೆ ಸೇರಿ ಗೇಲಿ ಮಾಡಿದಾಗ ದೀಪೂಗೆ ಸಿಟ್ಟು ತಡೆದುಕೊಳ್ಳಲಾಗಲಿಲ್ಲ. ಓಡಿ ಹೋಗಿ ಆತನನ್ನು ಹಿಡಿದು ಗೋಡೆಗೆ ಗುದ್ದಿದ್ದ. ಅಲ್ಲಿಂದೆತ್ತಿ ಆತನ ಮುಖವನ್ನು ಪಕ್ಕದ ಗೂಡಂಗಡಿಗೆ ಅದ್ದಿದ್ದ. ಇತರರು ದೀಪೂವಿನಿಂದ ಆತನನ್ನು ಬೇರ್ಪಡಿಸಿದ್ದರು. ದೃಶ್ಯವನ್ನು ನೋಡಿದ ಒಡತಿಗೆ ದೀಪೂನ ಬಗ್ಗೆ ವಿಶೇಷ ಅಭಿಮಾನವುಂಟಾಗಿತ್ತು. ದೀಪೂವಿಗೂ ಅದೇ ಬೇಕಿತ್ತು. ಯಜಮಾನಿಯ ಮುಂದೆ 'ತಾನು ಅಂಜುಬುರುಕನಲ್ಲ' ಎಂಬುದನ್ನು ಪ್ರದರ್ಶಿಸಬೇಕಾದುದು ಆತನ ಅಗತ್ಯವೂ ಆಗಿತ್ತು. ಆ ಮೂಲಕ ಯಜಮಾನಿಯ ಪ್ರಶಂಸೆಗೂ ಆತ ಪಾತ್ರನಾದ. ನಿಜವೆಂದರೆ ದೀಪೂ ಅಂಥ ಧೈರ್ಯವಂತನೇನೂ ಆಗಿರಲಿಲ್ಲ ಎಂಬುದು ಶೀಲಾಳಿಗೆ ಆಗ ಅರಿವಾಗಲಿಲ್ಲ.

ಡಾ. ಗಣೇಶರ ಮನೆಯಲ್ಲೇ ಮಾತುಕತೆಯಾಡುತ್ತಾ ಅಲ್ಲೇ ರಾತ್ರಿಯಾಗಿ ಬಿಟ್ಟರೆ ಅವರೇ ಶೀಲಾಳನ್ನು ಕೊಡವೂರಿಗೆ ಬಿಟ್ಟು ಬರುವುದಿತ್ತು. ಆಗೆಲ್ಲ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತಿರುತ್ತಿದ್ದ ದೀಪೂಗೆ ಕಿರಿಕಿರಿ ಎನಿಸುತ್ತಿತ್ತು. ಅದ್ಯಾಕೆ ಅಮ್ಮಾವ್ರು ಯಾವತ್ತೂ ಯಜಮಾನ್ರೊಂದಿಗೆ ಈ ರೀತಿ ಮಾತನಾಡೋದಿಲ್ಲ? ದಾರಿಯುದ್ದಕ್ಕೂ ಡಾ. ಗಣೇಶ್ ಮಾತನಾಡುವ ಕ್ರಮ, ನಗುವ ರೀತಿ, ಹೇಳುವ ಶೃಂಗಾರದ ಘಟನೆಗಳು ಶೀಲಾಳನ್ನು ಖುಷಿಪಡಿಸುತ್ತಿದ್ದರೂ 'ಈತ ತನ್ನ ಒಡತಿಯನ್ನು ಯಾವತ್ತಾದರೂ ಬಗಲಿಗೆ ಹಾಕಿಕೊಂಡಾನು' ಎಂಬ ಅನಗತ್ಯ ಚಿಂತೆ ದೀಪುವನ್ನು ಕಾಡುತ್ತಿತ್ತು. ಲಾನ್‌ನಲ್ಲಿ ಕುಳಿತು ಅವರಿಬ್ಬರೇ ರಸವಾರ್ತೆಗಳನ್ನು ಆಡಿಕೊಳ್ಳುತ್ತಿದ್ದಾಗ ದೀಪೂ ಅವರಿಗೆ ಬೇಕಾದ ಟೀ, ತಿನಿಸುಗಳನ್ನು ಒದಗಿಸಬೇಕಾಗುತ್ತಿತ್ತು. ಒಲ್ಲದ ಮನಸ್ಸಿನಿಂದ ಆತ ಅಂತಹ ಕೆಲಸಗಳನ್ನು ಮಾಡುತ್ತಿದ್ದ. ಒಮ್ಮೆ ಡಾ. ಗಣೇಶ್ ಕರಿಮಾಯಿ ಗುಡ್ಡದ ಕುರಿತಾದ ಜನಜನಿತ ಭೂತಕತೆಯೊಂದನ್ನು ರಸವತ್ತಾಗಿ ವಿವರಿಸುತ್ತಿದ್ದ. ಶೀಲಾ ಭಯಪಟ್ಟುಕೊಳ್ಳುತ್ತಾ ಅದನ್ನು ಕೇಳಿಸಿಕೊಳ್ಳುತ್ತಿದ್ದಳು. ದೀಪೂ ಟೀ ಕಪ್ ಬೀಳಿಸಿ ತನ್ನ ಅಸಹನೆಯನ್ನು ವ್ಯಕ್ತಪಡಿಸಿದ್ದೂ ಶೀಲಾ 'ಅಮ್ಮೋ' ಎಂದು ಉದ್ಗಾರವೆತ್ತಿದ್ದೂ ಏಕಕಾಲದಲ್ಲಾಗಿತ್ತು! ಕರಿಮಾಯಿ ಗುಡ್ಡದ ಮಹಿಮೆ ವಿವಿಧ ರೂಪದಲ್ಲಿ ಆಕೆಯ ಕಿವಿಗೆ ಅಪ್ಪಳಿಸುತ್ತಿದ್ದುದು ಭಗವತಿ ಎಸ್ಟೇಟಿನ ಅವಳ ವಾಸವನ್ನು ಮತ್ತಷ್ಟು ದುಸ್ತರಗೊಳಿಸುತ್ತಿತ್ತು.

ದೀಪೂ ಆಗಾಗ ಕೊಡವೂರಿಗೆ ಹೋಗಿ ಬರುವುದುಂಟು. ಸಣ್ಣ ಪುಟ್ಟ ಸಾಮಗ್ರಿಗಳೇನಾದರೂ ಬೇಕಿದ್ದರೆ ಕೊಡವೂರಿನಲ್ಲಿ ಸಿಗುತ್ತಿದ್ದುವು. ಒಳ್ಳೆಯ ತರಕಾರಿ, ಹಣ್ಣು, ತಿಂಡಿ ತಿನಿಸುಗಳನ್ನು ಮಾತ್ರ ನಾಲ್ಕು ಕಿಲೋಮೀಟರ್ ದೂರದ ವೀರನಗರದಿಂದಲೇ ತರಬೇಕಿತ್ತು. ಯಾವುದಕ್ಕೂ ಕೊಡವೂರಿಗೆ ಬಾರದೆ ಬೇರೆ ದಾರಿಯಿಲ್ಲ. ಹಾಗೆ ಬಂದಾಗಲೆಲ್ಲ ಸೋಮಾರಿಕಟ್ಟೆಯ ಗೆಳೆಯರು ಆತನನ್ನು ರೇಗಿಸುತ್ತಿದ್ದುದುಂಟು.

'ಯಾವಾಗಲೂ ಅವಳ ಹಿಂದೆ ಅಲೆಯೋದೇ ಆಯ್ತು. ಬೇರೇನೂ ಇವನಿಂದ ಕಿಸಿಯೋಲ್ಲ'.

'ವೀರನಗರದ ಡಾಕ್ಟ್ರೊಬ್ಬ ಬಂದೂ ಬಂದೂ ಹೋಗ್ತಾನೆ'.

'ಮೊನ್ನೆ ಇನ್ನೊಬ್ಬ ಹಳೇ ಗಿರಾಕಿ ಬುಲೆಟ್ ಬೈಕಲ್ಲಿ ಬಂದಿದ್ನಂತೆ'.

'ಇವನೊಬ್ಬ ಶುದ್ಧ ಬೇಕೂಫ, ಎಲ್ಲ ನೋಡ್ಕೊಂಡು ತೆಪ್ಪಗೆ ಕೂತಿದ್ದಾನೆ, ಅಮ್ಮಾವ್ರೆ ಅಮ್ಮಾವ್ರೆ ಅನ್ತಾ'.

'ಮಾತೆತ್ತಿದರೆ ಬೆಂಗ್ಳೂರು, ಡೆಲ್ಲಿ ಅಂತೆಲ್ಲ ಹೇಳ್ತಾನೆ. ಎಲ್ಲಾ ಬರೀ ಬುರುಡೆ'.

'ಅದಕ್ಕೆಲ್ಲ ಎದೆ ಗಟ್ಟಿ ಬೇಕೋ, ಇವನಿಂದ ಅದೊಂದೂ ಕಿಸಿಯೋಲ್ಲ'.

ಒಬ್ಬೊಬ್ಬರ ಒಂದೊಂದು ಬಗೆಯ ಕೊಂಕು ಮಾತುಗಳು ದೀಪೂವನ್ನು ಇರಿಯುತ್ತಿದ್ದುವು. ಸೋಮಾರಿಕಟ್ಟೆಯಲ್ಲಿ ಜಗಳವೆಬ್ಬಿಸಿ ಎಲ್ಲರನ್ನೂ ಎದುರು ಹಾಕಿಕೊಳ್ಳುವ ಧೈರ್ಯ ಪರವೂರಿನಿಂದ ಬಂದ ದೀಪೂವಿಗಿರಲಿಲ್ಲ. ಎಲ್ಲವನ್ನೂ ಕೇಳಿಸಿಕೊಂಡು 'ಇಂದಲ್ಲದಿದ್ದರೆ ನಾಳೆ ನನ್ನ ಶೌರ್ಯ ತೋರಿಸಿಯೇ ಸಿದ್ಧ, ನೀವು ನೋಡ್ತಾ ಇರಿ. ಈ ದೀಪು ಯಾವ ಮಗಾಂತ ಆಗ ಗೊತ್ತಾಗ್ತದೆ' ಎಂಬ ರೀತಿಯ ಕೃತಕ ಅಭಿನಯ ನೀಡಿ, ಅವರೆದುರು ಶಹಬ್ಬಾಸ್ ಎನ್ನಿಸಿಕೊಳ್ಳಲು ಯತ್ನಿಸುತ್ತಿದ್ದ. ಆದರೂ ತನ್ನ ಪೇಟೆಯ ಅನುಭವವನ್ನು ಈ ಹಳ್ಳಿಗರು ಜಾಲಾಡುವುದನ್ನು ನೆನೆದಾಗ ದೀಪೂನ ಮೈಯೆಲ್ಲ ಉರಿದುಹೋಗುತ್ತಿತ್ತು.

ಪ್ರೊ. ಭಾಸ್ಕರ್ ಮನೆಗೆ ತಡವಾಗಿ ಬರುವುದು ಮಾಮೂಲಿಯಾಗತೊಡಗಿತ್ತು. ಅಂತಹ ದಿನಗಳಲ್ಲಿ ಬೆಳಗ್ಗಿನಿಂದ ಮನೆಯಲ್ಲಿ ಕುಳಿತು ಮಾಡುವುದೇನು ಎಂಬ ಸಮಸ್ಯೆ ಬಂದಾಗ ಡಾ. ಗಣೇಶರ ಮನೆಯಂತೂ ತಯಾರಿತ್ತು. ಆತನ ಹೆಂಡತಿ ಕಾವೇರಿ, ಶೀಲಾಳ ಮೇಲಿಂದ ಮೇಲಿನ ಬರುವಿಕೆಯನ್ನು ಆಂತರಿಕವಾಗಿ ಒಪ್ಪದಿದ್ದರೂ ಅಣ್ಣ–ತಂಗಿ ಹಣೆಪಟ್ಟಿ ಇರುವುದರಿಂದ ಬಹಿರಂಗವಾಗಿ ಏನನ್ನೂ ತೋರ್ಪಡಿಸುತ್ತಿರಲಿಲ್ಲ. ಶೀಲಾಳಿಗಾದರೋ ಕಾವೇರಿಯ ಪುಟ್ಟ ಮಗುವನ್ನು ಆಡಿಸುವುದೆಂದರೆ ಎಲ್ಲಿಲ್ಲದ ಖುಷಿ. 'ಎಲ್ಲಾದರೂ ತನ್ನ ಮಗು ಉಳಿದಿರುತ್ತಿದ್ದರೆ ಕಾವೇರಿಯ ಮಗುವಿಗಿಂತ ಎರಡು ವರ್ಷ ದೊಡ್ಡವನಾಗಿರುತ್ತಿದ್ದ'. ಅದನ್ನು ನೆನೆದಾಗಲೆಲ್ಲ ಆಕೆಯ ಕಣ್ಣೀರು ಕಣ್ಣೊಳಗೇ ತೇಲಿ ತೇಲಿ ಅಲ್ಲೇ ಇಂಗಿಹೋಗುತ್ತಿತ್ತು.

ಮಧ್ಯಾಹ್ನ ಡಾ. ಗಣೇಶ್ ಮನೆಗೆ ಬಂದು, ಎಲ್ಲರೂ ಜೊತೆಯಾಗಿ ಕುಳಿತು ಊಟ ಮಾಡಿದ ಬಳಿಕ ಗಣೇಶ್ ವಿಶ್ರಾಂತಿಗೆ ಸಲ್ಲುತ್ತಿದ್ದ. ಸಾಯಂಕಾಲ ಕ್ಲಿನಿಕ್‌ಗೆ ಹೊರಡಬೇಕಿದ್ದರೆ ಡಾ. ಗಣೇಶ್ ಶೀಲಾಳಿಗೆ, 'ನಾನು ಕ್ಲಿನಿಕ್‌ನಿಂದ ಬಂದ ಮೇಲೆ ಮನೆಗೆ ಬಿಡ್ತೇನೆ. ಹೇಗಿದ್ದರೂ ನಿನ್ನ ಯಜಮಾನರು ಬರ್ಲಿಕ್ಕೆ ಲೇಟಾಗುತ್ತದಲ್ಲ. ಅಲ್ಲಿ ಹೋಗಿ ಮಾಡೋದೇನು?' ಎನ್ನುತ್ತಿದ್ದ. ರಾತ್ರಿ ಕ್ಲಿನಿಕ್ ಮುಚ್ಚಿ ಡಾ. ಗಣೇಶ್ ಮನೆಗೆ ಬರಬೇಕಿದ್ದರೆ ಶೀಲಾ ಅಲ್ಲೇ ಊಟ ಮುಗಿಸಿ ಕಾಯುವುದು ವಾಡಿಕೆ. ಕೆಲವೊಮ್ಮೆ ಪ್ರೊ. ಭಾಸ್ಕರ್ ಕೂಡ ಅಲ್ಲಿಗೇ ಬಂದು ಜೊತೆಯಾಗಿ ಹೋಗುತ್ತಿದ್ದುದೂ ಉಂಟು. ಇಲ್ಲವಾದರೆ ಡಾ. ಗಣೇಶ್ ಕರೆದೊಯ್ಯುವುದು ಇದ್ದೇ ಇರುತ್ತಿತ್ತು.

ಹಾಗೆ ಅವೊಂದು ರಾತ್ರಿಯೂ ಡಾ. ಗಣೇಶ್ ಶೀಲಾಳನ್ನು ಅವಳ ಮನೆಗೆ ಬಿಟ್ಟುಹೋಗಿದ್ದ. ಪ್ರೊ. ಭಾಸ್ಕರ್ ಇನ್ನೂ ಬಂದಿರಲಿಲ್ಲ. ದೀಪೂ ಹೊರಗಡೆ ಮೆಟ್ಟಿಲಲ್ಲಿ ಕುಳಿತು ತೂಕಡಿಸುತ್ತಿದ್ದ.